# ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ನಿಯಮಗಳು, 2005

## ವಿಷಯಾನುಕ್ರಮಣಿಕೆ

**ಪ್ರಕರಣಗಳು** **ಪುಟ ಸಂಖ್ಯೆಗಳು**


1. ಚಿಕ್ಕ ಹೆಸರು ಮತ್ತು ಪ್ರಾರಂಭ ........ 42
2. ಪರಿಭಾಷೆಗಳು ........ 42
3. 4ನೇ ಪ್ರಕರಣದ ಅಡಿಯಲ್ಲಿ ಕೆಲವು ಇತರ ಮಾಹಿತಿ ಮುಂತಾದುವುಗಳನ್ನು ಪ್ರಕಟಿಸುವುದು ........ 42
4. ಶುಲ್ಕ ........ 42
5. ರಾಜ್ಯ ಮಾಹಿತಿ ಆಯೋಗದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಸೇವಾ ಷರತ್ತುಗಳು ........ 44
6. 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲು ........ 44
7. 19ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲುಗಳ ಸಂಬಂಧದಲ್ಲೆ ಕಾರ್ಯವಿಧಾನ ........ 45
8. ಅಪೀಲಿನೊಂದಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು ........ 45
9. ಅಪೀಲನ್ನು ತೀರ್ಮಾನಿಸುವಲ್ಲಿನ ಕಾರ್ಯವಿಧಾನ ........ 45
10. ಆಯೋಗದಿಂದ ನೋಟೀಸ್ ಜಾರಿ ........ 46
11. ಅಪೀಲುದಾರ ಅಥವಾ ಫಿರ್ಯಾದುದಾರನು ಖುದ್ದಾಗಿ ಹಾಜರಾಗುವುದು ........ 46
12. ರಾಜ್ಯ ಮಾಹಿತಿ ಆಯೋಗದ ಆದೇಶ ........ 47
13. 18ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿಯ ದೂರುಗಳಿಗಾಗಿ ಕಾರ್ಯವಿಧಾನ ........ 47
14. ಏಕವಸ್ತು ವಿಷಯಕ್ಕೆ ಮಾತ್ರ ಸಂಬಂಧಿಸಿದ ಕೋರಿಕೆ ........ 47
15. ನಮೂನೆ ಎ ........ 48

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಿಆಸುಇ 74 ಮಾಹಅ 2005 (ಭಾಗ-2) ಬೆಂಗಳೂರು, ದಿನಾಂಕ 11ನೇ ಅಕ್ಟೋಬರ್ 2005**

(ಅಧಿಸೂಚನೆ ಸಂಖ್ಯೆ ಸಿಆಸುಇ 74 ಮಾಹಅ 2005 (ಭಾಗ-II) ದಿನಾಂಕ 15-7-2006, ಸಂಖ್ಯೆ ಸಿಆಸುಇ 11 ಮಾಹಅ 2006 ದಿನಾಂಕ 26-12-2006, ಸಂಖ್ಯೆ ಸಿಆಸುಇ 7 ಮಾಹಅ 2006, ದಿನಾಂಕ 10-1-2007, ಸಂಖ್ಯೆ ಸಿಆಸುಇ 2 ಮಾಹಅ 2003, ದಿನಾಂಕ 13-2-2007, ಸಂಖ್ಯೆ ಸಿಆಸುಇ 39 ಮಾಹಅ 2007, ದಿನಾಂಕ 11-7-2007 ಮತ್ತು ಸಂಖ್ಯೆ ಸಿಆಸುಇ 14 ಮಾಹಅ 2008 ದಿನಾಂಕ 17-3-2008ರ ಮೂಲಕ ತಿದ್ದುಪಡಿ ಮಾಡಲಾದಂತೆ).

ಮಾಹಿತಿ ಹಕ್ಕು ಅಧಿನಿಯಮ, 2005 (ಕೇಂದ್ರ ಅಧಿನಿಯಮ ಸಂಖ್ಯೆ 2005ರ 22)ರ 27ನೇ ಪ್ರಕರಣದ (1) ಮತ್ತು (2)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು, 2005 ಎಂದು ಕರೆಯತಕ್ಕದ್ದು.

(2) ಇವುಗಳು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(i) "ಅಧಿನಿಯಮ" ಎಂದರೆ, ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ ಸಂಖ್ಯೆ 22);

(ii) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ.

3. **4ನೇ ಪ್ರಕರಣದ ಅಡಿಯಲ್ಲಿ ಕೆಲವು ಇತರ ಮಾಹಿತಿ ಮುಂತಾದವುಗಳನ್ನು ಪ್ರಕಟಿಸುವುದು.-** (1) ಪ್ರಕರಣದ 4(4)ರ ಅಡಿಯಲ್ಲಿಯ ಮಾಹಿತಿಯ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತಿರತಕ್ಕದ್ದು. ವಿವರಗಳು ಎಲ್ಲಿ ಲಭ್ಯ ಇವೆ ಎಂಬುದನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಚನಾ ಫಲಕದ ಮೇಲೆ ಪ್ರದರ್ಶಿಸಿ ಸೂಚಿಸತಕ್ಕದ್ದು. ಅಲ್ಲದೇ ಸಾರ್ವಜನಿಕ ಪ್ರಾಧಿಕಾರಿಗಳು ಮಾಹಿತಿಯನ್ನು ಪ್ರಸಾರ ಮಾಡುವುದಕ್ಕಾಗಿ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಯಾವುದೇ ವಿಧಾನವನ್ನು ಅನುಸರಿಸಬಹುದು.

(2) ಹಾಗೆ ಪ್ರಸಾರ ಮಾಡಿದ ಮಾಹಿತಿಯು ಸಂಬಂಧಪಟ್ಟ ಕಛೇರಿಯ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮತ್ತು ಸಹಾಯಕ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ದೂರವಾಣಿ ಸಂಖ್ಯೆ ಫ್ಯಾಕ್ಸ್ ಸಂಖ್ಯೆ ಮುಂತಾದವುಗಳನ್ನು ಒಳಗೊಂಡಿರತಕ್ಕದ್ದು.

4. **ಶುಲ್ಕ.-** (1) ಅಧಿನಿಯಮದ 6ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ಇಚ್ಛಿಸುವ ಯಾವೊಬ್ಬ ವ್ಯಕ್ತಿಯು ನಮೂನೆ-ಎಯಲ್ಲಿ ಅಥವಾ ಸಾಧ್ಯವಾದಷ್ಟು ಮಟ್ಟಿಗೆ ನಮೂನೆಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ವಿವರಗಳನ್ನು ಒಳಗೊಂಡಂಥ ಇನ್ನಾವುದೇ ನಮೂನೆಯಲ್ಲಿ ಒಂದು ಅರ್ಜಿಯನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರ, ಸಹಾಯಕ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಇವರಿಗೆ 10 ರೂಪಾಯಿಗಳ ಪ್ರಾರಂಭಿಕ ಶುಲ್ಕದೊಡನೆ ಸಲ್ಲಿಸತಕ್ಕದ್ದು.ಅಧಿನಿಯಮದ ಅಡಿಯಲ್ಲಿ ಕೋರಿಕೆಯನ್ನು ಸ್ವೀಕರಿಸುವ ಪ್ರತಿಯೊಬ್ಬ ಅಧಿಕಾರಿಯು ಒಂದು ಸ್ವೀಕೃತಿ ಪತ್ರ ನೀಡತಕ್ಕದ್ದು.

(2) (ಎ), 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿರುವ ಮಾಹಿತಿಯನ್ನು ಒದಗಿಸುವುದಕ್ಕಾಗಿ, ಮಾಹಿತಿ ಪೂರೈಕೆಗಾಗಿ ಎ4 ಅಳತೆಯ ಕಾಗದದಲ್ಲಿನ ವಿಷಯದ ಸಂಬಂಧದಲ್ಲಿ ಪ್ರತಿ ಪುಟಕ್ಕೆ 2/- ರೂಪಾಯಿಗಳ ಶುಲ್ಕ ಇರತಕ್ಕದ್ದು.

1[(ಎಎ) 4ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಸಾರ ಮಾಡಿದ ಮಾಹಿತಿಯನ್ನು ಒದಗಿಸುವುದಕ್ಕಾಗಿ ಎ4 ಅಳತೆಯಲ್ಲಿನ ವಿಷಯಗಳ ಸಂಬಂಧದಲ್ಲಿ ಪ್ರತಿ ಪುಟಕ್ಕೆ ಒಂದು ರೂಪಾಯಿ ಶುಲ್ಕ ಇರತಕ್ಕದ್ದು.]1

[1](ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಆರ್‌ಟಿಐ 2006, ದಿನಾಂಕ 26-12-2006ರನ್ವಯ ಸೇರಿಸಲಾಗಿದೆ).

(ಬಿ) 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿನ ಮಾಹಿತಿ ಒದಗಿಸುವುದಕ್ಕಾಗಿ, ಭೂಪಟಗಳು, ನಕ್ಷೆಗಳು, ವರದಿಗಳು, ಆಂಶಿಕ ದಾಖಲೆ ಅಥವಾ ಯಾವುದೇ ತಾಂತ್ರಿಕ ಮಾಹಿತಿ ಅಥವಾ ನಮೂನೆ ಅಥವಾ ಮಾದರಿಗಳ ಸಂಬಂಧದಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ಅಗತ್ಯವಾದ ಶ್ರಮ ಮತ್ತು ಸಾಮಗ್ರಿಗಳ ವೆಚ್ಚಕ್ಕೆ ಅನುಸಾರವಾಗಿ ಪ್ರತಿಯೊಂದು ಸಂದರ್ಭದಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಯುಕ್ತ ಶುಲ್ಕವನ್ನು ನಿಗದಿಪಡಿಸತಕ್ಕದ್ದು.

(ಸಿ) ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಪರಿವೀಕ್ಷಿಸುವ ಸಂಬಂಧದಲ್ಲಿ ಮೊದಲ ಒಂದು ಗಂಟೆಗೆ ಯಾವುದೇ ಶುಲ್ಕವಿಲ್ಲ. ಮೇಲಿನ ನಿಯಮ 4(1)ರ ಅಡಿಯಲ್ಲಿ ನಿಯಮಿಸಲಾದಂತೆ ಪ್ರಾರಂಭಿಕ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಗಳಿಗೆ ತದನಂತರದ ಪ್ರತಿ ಅರ್ಧ ಗಂಟೆಗೆ 1[ಅಥವಾ ಅದರ ಭಾಗಕ್ಕೆ ಹತ್ತು ರೂಪಾಯಿಗಳಂತೆ]1 ಶುಲ್ಕವನ್ನು ವಿಧಿಸತಕ್ಕದ್ದು. ಕಾಮಗಾರಿಗಳ ಪರಿವೀಕ್ಷಣೆಗಾಗಿ, ನಿಯಮ 4(1)ರ ಅಡಿಯಲ್ಲಿ ನಿಯಮಿಸಲಾದಂಥ ಪ್ರಾರಂಭಿಕ ಶುಲ್ಕಕ್ಕೆ ಹೆಚ್ಚುವರಿಯಾಗಿ ಪ್ರತಿಯೊಂದು ಸಂದರ್ಭದಲ್ಲಿ ಅಗತ್ಯವಾದ ಶ್ರಮ ಮತ್ತು ಸಾಮಗ್ರಿಗಳಿಗೆ ಅನುಗುಣವಾಗಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ಶುಲ್ಕವನ್ನು ನಿಗದಿಪಡಿಸತಕ್ಕದ್ದು.

1[ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಅರ್‌ಟಿಐ 2006, ದಿನಾಂಕ 26-12-2006ರನ್ವಯ ಪ್ರತ್ಯಾಯೋಜಿಸಲಾಗಿದೆ]1

(3) 7ನೇ ಪ್ರಕರಣದ (5)ನೇ ಉಪ ಪ್ರಕರಣದ ಅಡಿಯಲ್ಲಿ ಮಾಹಿತಿ ಒದಗಿಸುವುದಕ್ಕಾಗಿ, ಮಾಹಿತಿಯನ್ನು ಡಿಸ್ಕೆಟ್ ಅಥವಾ ಫ್ಲಾಪಿ ಅಥವಾ ಸಿ.ಡಿ. ಅಥವಾ ಇನ್ಯಾವುದೇ ವಿದ್ಯುನ್ಮಾನ ವಿಧಾನದ ಮೂಲಕ ನೀಡಲು ಶುಲ್ಕವು 50/- ರೂಪಾಯಿಗಳು ಆಗಿರತಕ್ಕದ್ದು.

(4) ಶುಲ್ಕವನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯವರ ಹೆಸರಿನಲ್ಲಿ ಪಡೆದ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ನಗದಾಗಿ ಅಥವಾ ಕರ್ನಾಟಕ ಆರ್ಥಿಕ ಸಂಹಿತೆ (ಕ.ಆ.ಸಂ.) ಅನುಸಾರವಾಗಿ ಖಜಾನೆಯಲ್ಲಿ ಸಂದಾಯ ಮಾಡುವ ಮೂಲಕ ಸಂಗ್ರಹಿಸತಕ್ಕದ್ದು.

(5) 7ನೇ ಪ್ರಕರಣದ (5)ನೇ ಉಪ-ಪ್ರಕರಣದ ಪರಂತುಕದ ಅಡಿಯಲ್ಲಿ ವಿನಾಯಿತಿಯನ್ನು ಕ್ಲೇಮು ಮಾಡುವ ವ್ಯಕ್ತಿಯು ಅವನು/ಅವಳು ಬಡತನದ ರೇಖೆಗಿಂತ ಕೆಳಗಿರುವವರ ಪ್ರವರ್ಗಕ್ಕೆ ಸೇರಿರುವವರೆಂದು ಸಂಬಂಧಪಟ್ಟ ಪ್ರಾಧಿಕಾರಿಯು ನೀಡಿದ ಸಿಂಧುವಾದ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

1[(6) ಬಡತನ ರೇಖೆಗಿಂತ ಕೆಳಗಿನ ಪಡಿತರ ಚೀಟಿಯನ್ನು ಹೊಂದಿರುವವರ ಸಂದರ್ಭದಲ್ಲಿ ಕೋರಿಕೊಂಡ ಮಾಹಿತಿಯು ಒಂದು ನೂರು ಪುಟಗಳೊಳಗಿದ್ದರೆ, ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.ಕೋರಿಕೊಂಡ ಮಾಹಿತಿಯು ಒಂದು ನೂರು ಪುಟಗಳನ್ನು ಮೀರಿದ್ದರೆ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು (2)ನೇ ಉಪ-ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಶುಲ್ಕವನ್ನು ವಿಧಿಸಿ ಅಗತ್ಯವಾದ ದಸ್ತಾವೇಜುಗಳ ಪರಿವೀಕ್ಷಣೆಗೆ ಅವಕಾಶ ನೀಡಬಹುದು ಅಥವಾ (2)ನೇ ಉಪ ಪ್ರಕರಣದ (ಎಎ) ಖಂಡದ ಅಡಿಯಲ್ಲಿ ಉಪಬಂಧಿಸಲಾದಂತೆ ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಮಾಹಿತಿಯನ್ನು ಒದಗಿಸಬಹುದು.]1

1. ಉಪನಿಯಮ (6)ನ್ನು ಅಧಿಸೂಚನೆ ಸಂಖ್ಯೆ ಡಿಪಿಎಆರ್ 39 ಆರ್‌ಟಿಐ 2007, ದಿನಾಂಕ 11-7-2007ರನ್ವಯ ಸೇರಿಸಲಾಗಿದೆ.

**5. ರಾಜ್ಯ ಮಾಹಿತಿ ಆಯೋಗದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಸೇವಾ ಷರತ್ತುಗಳು.-** (1) ರಾಜ್ಯ ಮಾಹಿತಿ ಆಯೋಗದ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು, ಸಮಾನ ದರ್ಜೆಯ ಇತರೆ ರಾಜ್ಯ ಸರ್ಕಾರಿ ನೌಕರರ ಸಂಬಳ ಮತ್ತು ಭತ್ಯೆಗಳಿಗೆ ಸಮನಾಗಿರತಕ್ಕದ್ದು.

(2) ರಾಜ್ಯ ಸರ್ಕಾರಿ ನೌಕರರ ಸೇವಾ ಷರತ್ತುಗಳು ಮತ್ತು ಶಿಸ್ತಿಗೆ ಸಂಬಂಧಪಡುವ ನಿಯಮಗಳು ಈ ನಿಯಮಗಳ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಡುಗಳಿಗೊಳಪಟ್ಟು ರಾಜ್ಯ ಮಾಹಿತಿ ಆಯೋಗದ ನೌಕರರಿಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

(3) ನೇಮಕಾತಿ ವಿಧಾನವು, ಕ.ಸಿ.ಸೇ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಅಡಿಯಲ್ಲಿನ ಉಪಬಂಧಗಳಿಗನುಸಾರವಾಗಿ, ಸಮಾನ ದರ್ಜೆಯ ಸರ್ಕಾರಿ ನೌಕರರನ್ನು ರಾಜ್ಯದ ಯಾವುದೇ ಸಿವಿಲ್ ಸೇವೆಯಿಂದ ಅಥವಾ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಪ್ರತಿನಿಯೋಜನೆ ಮೂಲಕ 1[ಅಥವಾ ಗುತ್ತಿಗೆ ಆಧಾರದ ಮೇಲೆ]1 ಅಥವಾ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳತಕ್ಕದ್ದು;

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 7 ಆರ್‌ಟಿಐ 2006, ದಿನಾಂಕ 10-1-2007ರನ್ವಯ ಸೇರಿಸಲಾಗಿದೆ.

ಪರಂತು, ಹೊರಗುತ್ತಿಗೆಯು, ಸಫಾಯಿ ಕೆಲಸಗಾರರು, ಗೃಹ ನಿರ್ವಹಣೆ, ಗೃಹ ಪರಿಚಾರಕರು ಮತ್ತು ಸುರಕ್ಷಾ ಗಾರ್ಡ್‌ಗಳ ಹುದ್ದೆಗಳಿಗೆ ಸೀಮಿತವಾಗಿರತಕ್ಕದ್ದು.

**6. 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲು.–** (1) ಸಾರ್ವಜನಿಕ ಪ್ರಾಧಿಕಾರವು 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲನ್ನು ಯಾರಿಗೆ ಸಲ್ಲಿಸತಕ್ಕದ್ದೋ ಆ ಅಧಿಕಾರಿಯ ಪದನಾಮವನ್ನು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಪೀಲು ಅರ್ಜಿಯ ಜೊತೆಯಲ್ಲಿ, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ಪ್ರತಿ ಇರಿಸತಕ್ಕದ್ದು ಮತ್ತು ಅರ್ಜಿಯಲ್ಲಿ ಈ ಮುಂದಿನವುಗಳನ್ನು ನಿರ್ದಿಷ್ಟವಾಗಿ ತಿಳಿಸತಕ್ಕದ್ದು.–

(i) ಅರ್ಜಿದಾರನ ಹೆಸರು ಮತ್ತು ವಿಳಾಸ ಮತ್ತು ಯಾರ ವಿರುದ್ಧ ಅಪೀಲು ಸಲ್ಲಿಸಲಾಗುತ್ತದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಂಬಂಧಿಸಿದ ವಿವರಗಳು;

(ii) ಯಾರ ವಿರುದ್ಧ ಅಪೀಲು ಸಲ್ಲಿಸಲಾಗುತ್ತದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಆದೇಶ ಯಾವುದಾದರೂ ಇದ್ದರೆ, ಅದನ್ನು ಸ್ವೀಕರಿಸಿದ ದಿನಾಂಕ;

(iii) ಅಪೀಲಿಗೆ ಕಾರಣಗಳು; ಮತ್ತು

(iv) ಅರ್ಜಿದಾರನು ಕ್ಲೇಮು ಮಾಡುವ ಪರಿಹಾರ.

(3) 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿನ ಅಪೀಲು ವಿಚಾರಣಾ ಪ್ರಾಧಿಕಾರಿಯು ಅಪೀಲಿನ ವಿಚಾರಣೆಗಾಗಿ ಒಂದು ದಿನಾಂಕವನ್ನು ನಿಗದಿಪಡಿಸತಕ್ಕದ್ದು. ಅಪೀಲಿನ ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಥವಾ ಅಪೀಲನ್ನು ಮುಂದೂಡಬಹುದಾದ ಮುಂದಿನ ದಿನಾಂಕದಂದು ಅಪೀಲು ವಿಚಾರಣಾ ಪ್ರಾಧಿಕಾರಿಯು ಪಕ್ಷಕಾರರ ಅಹವಾಲು ಕೇಳಿದ ತರುವಾಯ ಅಪೀಲಿನ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

1[**7. 19ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲು.–** 19ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸುವ ಅಪೀಲು ಈ ಮುಂದಿನ ಮಾಹಿತಿಯನ್ನು ಒಳಗೊಂಡಿರತಕ್ಕದ್ದು ಎಂದರೆ:–

(i) ಅಪೀಲುದಾರನ ಹೆಸರು ಮತ್ತು ವಿಳಾಸ;

(ii) ಯಾರ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ವಿಳಾಸ;

(iii) ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಸಂಖ್ಯೆ ಏನಾದರೂ ಇದ್ದರೆ, ಆ ಸಂಖ್ಯೆ ಸೇರಿದಂತೆ ಆದೇಶದ ವಿವರಗಳು;

(iv) ಅಪೀಲಿಗೆ ಕಾರಣವಾಗಿರುವ ಸಂಕ್ಷಿಪ್ತ ಅಂಶಗಳು;

(v) ಭಾವಿತ ನಿರಾಕರಣೆಯ ವಿರುದ್ಧ ಅಪೀಲು ಸಲ್ಲಿಸಲಾಗಿದ್ದರೆ, ಅರ್ಜಿಯ ಸಂಖ್ಯೆ ಮತ್ತು ದಿನಾಂಕ ಸೇರಿದಂತೆ ಅದರ ವಿವರಗಳು ಮತ್ತು ಯಾರಿಗೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ವಿಳಾಸ;

(vi) ಕೋರಿಕೊಂಡ ಕೋರಿಕೆ ಅಥವಾ ಪರಿಹಾರ;

(vii) ಕೋರಿಕೆ ಅಥವಾ ಪರಿಹಾರಕ್ಕಾಗಿ ಕಾರಣಗಳು;

(viii) ಅಪೀಲುದಾರನಿಂದ ಸತ್ಯಾಪನೆ; ಮತ್ತು

(ix) ಅಪೀಲನ್ನು ತೀರ್ಮಾನಿಸುವುದಕ್ಕಾಗಿ ಆಯೋಗವು ಅವಶ್ಯಕವೆಂದು ಭಾವಿಸಬಹುದಾದ ಯಾವುದೇ ಇತರ ಮಾಹಿತಿ]1

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 74 ಆರ್‌ಟಿಐ 2005 (ಭಾಗ-II) ದಿನಾಂಕ 15-7-2006ರನ್ವಯ ಪ್ರತ್ಯಾಯೋಜಿಸಲಾಗಿದೆ.

1[**8 ಅಪೀಲಿನೊಂದಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು.–** ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸಿದ ಪ್ರತಿಯೊಂದು ಅಪೀಲು ಈ ಮುಂದಿನ ದಸ್ತಾವೇಜುಗಳಿಂದ ಲಗತ್ತಾಗಿದ್ದು ತ್ರಿಪ್ರತಿಯಲ್ಲಿರತಕ್ಕದ್ದು, ಎಂದರೆ:–

(i) ಯಾವ ಆದೇಶ ಅಥವಾ ದಸ್ತಾವೇಜುಗಳ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ಅಥವಾ ದಸ್ತಾವೇಜುಗಳ ಸ್ವಯಂ ದೃಢೀಕೃತ ಪ್ರತಿಗಳು;

(ii) ಅಪೀಲುದಾರರಿಗೆ ಸಂಬಂಧಿಸಿದ ಮತ್ತು ಅಪೀಲಿನಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳ ಪ್ರತಿಗಳು;

(iii) ಅಪೀಲಿನಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳ ವಿಷಯ ಸೂಚಿ;

**9. ಅಪೀಲನ್ನು ತೀರ್ಮಾನಿಸುವಲ್ಲಿನ ಕಾರ್ಯವಿಧಾನ.–** ಅಪೀಲನ್ನು ತೀರ್ಮಾನಿಸುವಲ್ಲಿ ರಾಜ್ಯ ಮಾಹಿತಿ ಆಯೋಗವು.–

(i) ಸಂಬಂಧಪಟ್ಟ ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಯಿಂದ ಮೌಖಿಕ ಹೇಳಿಕೆ ಆಲಿಸಬಹುದು ಅಥವಾ ಅವರಿಂದ ಪ್ರಮಾಣದ ಮೇಲೆ ಅಥವಾ ಅಫಿದಾವಿತ್ ಮೇಲೆ ಲಿಖಿತ ಸಾಕ್ಷ್ಯವನ್ನು ಪಡೆಯಬಹುದು;

(ii) ದಸ್ತಾವೇಜುಗಳು ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಗಳನ್ನು ಅವಲೋಕಿಸಬಹುದು ಅಥವಾ ಪರಿವೀಕ್ಷಿಸಬಹುದು;

(iii) ಪ್ರಾಧಿಕೃತ ಅಧಿಕಾರಿಯ ಮೂಲಕ ಹೆಚ್ಚಿನ ವಿವರಗಳ ಅಥವಾ ಸಂಗತಿಗಳ ಬಗ್ಗೆ ವಿಚಾರಣೆ ಮಾಡಬಹುದು;

(iv) ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು, ರಾಜ್ಯ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿಯನ್ನು ಅಥವಾ ಮೊದಲು ಅಪೀಲನ್ನು ತೀರ್ಮಾನಿಸಿದಂಥ ಹಿರಿಯ ಅಧಿಕಾರಿಯನ್ನು ಅಥವಾ ಯಾರ ವಿರುದ್ಧ ದೂರು ಸಲ್ಲಿಸಲಾಗಿದೆಯೋ ಅಂಥ ವ್ಯಕ್ತಿಯನ್ನು ಸುನಾವಣೆ ಮಾಡಬಹುದು;

(v) ಮೂರನೇ ಪಕ್ಷಕಾರರನ್ನು ಸುನಾವಣೆ ಮಾಡಬಹುದು; ಮತ್ತು

(vi) ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ, ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಮೊದಲ ಅಪೀಲನ್ನು ತೀರ್ಮಾನಿಸಿದಂಥ ಇತರ ಹಿರಿಯ ಅಧಿಕಾರಿ ಅಥವಾ ಯಾರ ವಿರುದ್ಧ ದೂರು ಸಲ್ಲಿಸಲಾಗಿದೆಯೋ ಆ ವ್ಯಕ್ತಿ ಅಥವಾ ಮೂರನೇ ಪಕ್ಷಕಾರನಿಂದ ಅಫಿದಾವಿತ್ ಮೇಲೆ ಸಾಕ್ಷ್ಯವನ್ನು ಸ್ವೀಕರಿಸಬಹುದು.

**10. ಆಯೋಗದಿಂದ ನೋಟೀಸ್ ಜಾರಿ.–** ರಾಜ್ಯ ಮಾಹಿತಿ ಆಯೋಗವು ನೀಡಬೇಕಾದ ನೋಟೀಸನ್ನು ಈ ಮುಂದಿನ ಯಾವುದೇ ವಿಧಾನಗಳಲ್ಲಿ ಜಾರಿ ಮಾಡಬಹುದು ಎಂದರೆ:–

(i) ಪಕ್ಷಕಾರರಿಗೆ ಜಾರಿ ಮಾಡುವ ಮೂಲಕ;

(ii) ಪ್ರೊಸೆಸ್ ಸರ್ವರ್ ಮುಖಾಂತರ ಖುದ್ದಾಗಿ ವಶಾವಣೆ ಮಾಡುವ ಮೂಲಕ;

(iii) ಸ್ವೀಕೃತಿ ಪತ್ರ ಸಹಿತ ನೋಂದಾಯಿತ ಅಂಚೆ ಮೂಲಕ; ಅಥವಾ

(iv) ಕಛೇರಿ ಅಥವಾ ಇಲಾಖೆ ಮುಖ್ಯಸ್ಥರ ಮೂಲಕ;

(v) ಫ್ಯಾಕ್ಸ್ ಮೂಲಕ;

(vi) ಇ–ಮೇಲ್ ಮೂಲಕ;

– ಜಾರಿ ಮಾಡಬಹುದು.

**11. ಅಪೀಲುದಾರ ಅಥವಾ ಫಿರ್ಯಾದುದಾರನು ಖುದ್ದಾಗಿ ಹಾಜರಾಗುವುದು.–**

(1) ಸಂದರ್ಭಾನುಸಾರ, ಅಪೀಲುದಾರ ಅಥವಾ ಫಿರ್ಯಾದುದಾರನಿಗೆ ಪ್ರತಿಯೊಂದು ಸಂದರ್ಭದಲ್ಲಿ ಸುನಾವಣೆಯ ದಿನಾಂಕಕ್ಕೆ ಕನಿಷ್ಠ ಪಕ್ಷ ಹತ್ತು ಸ್ಪಷ್ಟ ದಿನಗಳ ಮೊದಲು ಸುನಾವಣೆ ದಿನಾಂಕವನ್ನು ತಿಳಿಸತಕ್ಕದ್ದು.

(2) ಸಂದರ್ಭಾನುಸಾರ, ಅಪೀಲಿದಾರನು ಅಥವಾ ಫಿರ್ಯಾದುದಾರನು, ತನ್ನ ವಿವೇಚನಾನುಸಾರ ರಾಜ್ಯ ಮಾಹಿತಿ ಆಯೋಗವು ಅಪೀಲಿನ ಅಥವಾ ಫಿರ್ಯಾದಿನ ಸುನಾವಣೆ ಮಾಡುವ ಸಮಯದಲ್ಲಿ ಖುದ್ದಾಗಿ ಅಥವಾ ತಾನು ಯುಕ್ತವಾಗಿ ಅಧಿಕೃತಗೊಳಿಸಿದ ಪ್ರತಿನಿಧಿಯ ಮೂಲಕ ಹಾಜರಾಗಬಹುದು ಅಥವಾ ಹಾಜರಾಗದೇ ಇರಬಹುದು.

(3) ಸಂದರ್ಭಾನುಸಾರ ಅಪೀಲುದಾರನಿಗೆ ಅಥವಾ ಫಿರ್ಯಾದುದಾರನಿಗೆ ಕೈ ಮೀರಿದ ಸನ್ನಿವೇಶಗಳಿಂದಾಗಿ ಸುನಾವಣೆಗೆ ಹಾಜರಾಗುವುದಕ್ಕೆ ಸಾಧ್ಯವಾಗಲಿಲ್ಲವೆಂದು ರಾಜ್ಯ ಮಾಹಿತಿ ಆಯೋಗವು ಮನಗಂಡರೆ. ಆಗ ಆಯೋಗವು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮೊದಲು ಅಥವಾ ಅದು ಸೂಕ್ತವೆಂದು ಭಾವಿಸುವಂಥ ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳುವ ಮೊದಲು ಸಂದರ್ಭಾನುಸಾರ, ಫಿರ್ಯಾದುದಾರನಿಗೆ ಅಥವಾ ಅಪೀಲುದಾರನಿಗೆ ಸುನಾವಣೆಗೆ ಇನ್ನೊಂದು ಅವಕಾಶವನ್ನು ನೀಡಬಹುದು.

(4) ಸಂದರ್ಭಾನುಸಾರ, ಅಪೀಲುದಾರನು ಅಥವಾ ಫಿರ್ಯಾದುದಾರನು, ಅಪೀಲಿನ ಪ್ರಕ್ರಿಯೆಯಲ್ಲಿ ತನ್ನ ವಿಷಯಗಳನ್ನು ಮಂಡಿಸುವಾಗ ಯಾರೇ ವ್ಯಕ್ತಿಯ ನೆರವನ್ನು ಕೋರಬಹುದು ಮತ್ತು ಆತನನ್ನು ಪ್ರತಿನಿಧಿಸುವ ವ್ಯಕ್ತಿಯು ನ್ಯಾಯವಾದಿಯಾಗಿರದಿರಬಹುದು.

**12. ರಾಜ್ಯ ಮಾಹಿತಿ ಆಯೋಗದ ಆದೇಶ.–** ರಾಜ್ಯ ಮಾಹಿತಿ ಆಯೋಗದ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಮುಕ್ತ ವ್ಯವಹರಣೆಗಳಲ್ಲಿ ಘೋಷಿಸತಕ್ಕದ್ದು. ಅಂಥ ಆದೇಶವನ್ನು ಅಧೀನ ಕಾರ್ಯದರ್ಶಿಯು ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಮಾಹಿತಿ ಆಯೋಗವು ಪ್ರಾಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಕ್ರಮಬದ್ಧವಾಗಿ ಅಧಿಪ್ರಮಾಣೀಕರಿಸತಕ್ಕದ್ದು.]1

1. ಉಪನಿಯಮ 8 ರಿಂದ 12ರವರೆಗೆ ಅಧಿಸೂಚನೆ ಸಂಖ್ಯೆ ಡಿಪಿಎಆರ್ 74 ಆರ್‌ಟಿಐ 2005 (ಭಾಗ–II) ದಿನಾಂಕ 15–7–2006ರನ್ವಯ ಸೇರಿಸಲಾಗಿದೆ.

1[**13. 18ನೇ ಪ್ರಕರಣದ (1)ನೇ ಉಪ ಪ್ರಕರಣದಡಿಯಲ್ಲಿ ಫಿರ್ಯಾದುಗಳಿಗಾಗಿ ಕಾರ್ಯವಿಧಾನ.–** 7, 8, 9, 10, 11ನೇ ನಿಯಮಗಳ ಅಡಿಯಲ್ಲಿ ಅಪೀಲುಗಳಿಗಾಗಿ ನಿಯಮಿಸಲಾದ ಕಾರ್ಯವಿಧಾನವು ಯಥೋಚಿತ ವ್ಯತ್ಯಾಸದೊಂದಿಗೆ ದೂರುಗಳಿಗೆ ಅನ್ವಯವಾಗತಕ್ಕದ್ದು.]1

1. ನಿಯಮ 13ನ್ನು ಅಧಿಸೂಚನೆ ಸಂಖ್ಯೆ ಡಿಪಿಎಆರ್ 2 ಆರ್‌ಟಿಐ 2007, ದಿನಾಂಕ 13–2–2007ರನ್ವಯ ಸೇರಿಸಲಾಗಿದೆ.

1[**14. ಏಕ ವಸ್ತು ವಿಷಯಕ್ಕೆ ಮಾತ್ರ ಸಂಬಂಧಿಸಿದ ಕೋರಿಕೆ.–** ಅಧಿನಿಯಮದ 6ನೇ ಪ್ರಕರಣದ ಅಡಿಯಲ್ಲಿ ಮಾಹಿತಿಗಾಗಿ ಲಿಖಿತ ಕೋರಿಕೆಯು ಒಂದು ವಸ್ತು ವಿಷಯಕ್ಕೆ ಸಂಬಂಧಿಸಿರತಕ್ಕದ್ದು ಮತ್ತು ಅದು ಸಾಮಾನ್ಯವಾಗಿ ಒಂದು ನೂರಾ ಐವತ್ತು ಪದಗಳಿಗೆ ಮೀರತಕ್ಕದ್ದಲ್ಲ. ಅರ್ಜಿದಾರನು ಒಂದಕ್ಕಿಂತ ಹೆಚ್ಚಿನ ವಸ್ತು ವಿಷಯಗಳ ಬಗ್ಗೆ ಮಾಹಿತಿ ಕೋರಬಯಸಿದ್ದರೆ ಅವನು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು;

ಪರಂತು, ಸಲ್ಲಿಸಲಾದ ಕೋರಿಕೆಯು ಒಂದಕ್ಕಿಂತ ಹೆಚ್ಚಿನ ವಸ್ತುಗಳಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು, ಮೊದಲ ವಸ್ತು ವಿಷಯಕ್ಕೆ ಸಂಬಂಧಿಸಿದ ಕೋರಿಕೆಗೆ ಮಾತ್ರ ಉತ್ತರ ನೀಡತಕ್ಕದ್ದು ಮತ್ತು ಪ್ರತಿ ಇತರ ವಸ್ತು ವಿಷಯಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವಂತೆ ಅರ್ಜಿದಾರನಿಗೆ ಸಲಹೆ ಮಾಡಬಹುದು.]1

1. ನಿಯಮ 14 ಅಧಿಸೂಚನೆ ಸಂಖ್ಯೆ: ಡಿಪಿಎಆರ್ 14 ಆರ್‌ಟಿಐ 2008 ದಿನಾಂಕ 17–3–2008ರನ್ವಯ ಸೇರಿಸಲಾಗಿದೆ.

**ನಮೂನೆ ಎ**

**[ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 6(1) ಮತ್ತು 7(1)]**

1. ಅರ್ಜಿದಾರನ ಪೂರ್ಣ ಹೆಸರು :
2. ವಿಳಾಸ :
3. ಅಗತ್ಯವಾದ ದಸ್ತಾವೇಜು/ಪರಿಶೀಲನೆ :

   ಮಾದರಿಗಳ ವಿವರಗಳು
4. ಮೇಲಿನವುಗಳಿಗೆ ಸಂಬಂಧಪಟ್ಟ ವರ್ಷ :
5. ಯಾರಿಂದ ಮಾಹಿತಿ ಅಗತ್ಯವಾಗಿದೆಯೋ ಆ ಸಾರ್ವಜನಿಕ ಮಾಹಿತಿ ಅಧಿಕಾರಿಯ ಪದನಾಮ ಮತ್ತು ವಿಳಾಸ.

ಸ್ಥಳ: ಅರ್ಜಿದಾರನ ಸಹಿ

ದಿನಾಂಕ:

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು

ಅವರ ಹೆಸರಿನಲ್ಲಿ

**ಕೆ.ಆರ್. ಬಡಿಗೇರ್,**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

ಇಲಾಖೆ (ಜನಸ್ಪಂದನ ಕೋಶ).